ಪ್ರತಿಬಿಂಬ

PRATIBIMBA –Multidisciplinary Kannada Research Journal of IIMRD
ISSN: 2582-2284
Vol-7 Issue-2, September-October 2025, Pp. 1-7
©*IIMRD*, Mysuru

IIMRD JOURNALS

www.iimrd.com

# ಕಿತ್ತೂರು ರಾಣಿ ಚೆನ್ನಮ್ಮ ವಸತಿ ಶಾಲೆಯ ವಿದ್ಯಾರ್ಥಿನಿಯರ ಶೈಕ್ಷಣಿಕ ಆಕಾಂಕ್ಷೆಗಳು

**ಸವಿತ ಸಿ.ಎನ್[1] ಮತ್ತು ಡಾ. ಎಂ. ಗುರುಲಿಂಗಯ್ಯ[2]**

[1]ಸಂಶೋಧನಾ ವಿದ್ಯಾರ್ಥಿ, [2]ಹಿರಿಯ ಪ್ರಾಧ್ಯಾಪಕರು

ಸಮಾಜಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗ, ಕುವೆಂಪು ವಿಶ್ವವಿದ್ಯಾಲಯ, ಜ್ಞಾನ ಸಹ್ಯಾದ್ರಿ ಶಂಕರಘಟ್ಟ, ಶಿವಮೊಗ್ಗ

**ಸಾರಾಂಶ: (Abstract)**

*'ಹೆಣ್ಣೊಂದು ಕಲಿತರೆ ಶಾಲೆಯೊಂದು ತೆರೆದಂತೆ', 'ಕಲಿತ ಹೆಣ್ಣು ಅಬಲೆಯಲ್ಲ ಸಬಲೆ', 'ಕಲಿತ ಹೆಣ್ಣು ಸಂಸಾರದ ಕಣ್ಣು' ಎಂಬ ವೇದ ವಾಕ್ಯಗಳು ಅಥವಾ ಅನುಭವದ ನಾಣ್ನುಡಿಯು ಹೆಣ್ಣು ಮಕ್ಕಳ ಶಿಕ್ಷಣದ ಮಹತ್ವವನ್ನು ಸಾರುತ್ತದೆ. ಶಿಕ್ಷಣವು ಆಧುನಿಕ ಸಮಾಜಕ್ಕೆ ಒಂದು ಅಸ್ತ್ರವಿದ್ದಂತೆ. ತನ್ನೆಲ್ಲಾ ಸಮಸ್ಯೆಗಳಿಗೆ ಪರಿಹಾರ ಸೂಚಿಸುವಂತಹ ಮಾರ್ಗಸೂಚಿಯಾಗಿದೆ. ಸಾಮಾಜಿಕವಾಗಿ, ಆರ್ಥಿಕವಾಗಿ, ಶೈಕ್ಷಣಿಕವಾಗಿ, ವೈಚಾರಿಕವಾಗಿ ಅಭಿವೃದ್ಧಿ ಹೊಂದಲು/ ಮುಂದುವರೆಯಲು ಶಿಕ್ಷಣ ದಾರಿದೀಪವಾಗಿದೆ. ಸಾಂಪ್ರದಾಯಿಕತೆಯ ಬಿಗಿ ಮುಷ್ಟಿಯಿಂದ ಆಧುನಿಕತೆಯತ್ತ ದಾಪುಗಾಲು ಹಾಕಲು ಅರ್ಥಾತ್ ಕ್ಷಿಪ್ರಗತಿಯ ಸಾಮಾಜಿಕ ಪರಿವರ್ತನೆಯನ್ನು ತರಲು ಶಿಕ್ಷಣವು ಒಂದು ಪರಿಣಾಮಕಾರಿಯಾದ ಅಸ್ತ್ರವಾಗಿದೆ ಎಂಬ ನಂಬಿಕೆಯು ಇಂದು ಹೆಚ್ಚು ಪ್ರಚಲಿತವಾಗಿದೆ. ಪರಿಣಾಮವಾಗಿ ಜಗತ್ತಿನ ಹೆಚ್ಚಿನ ಎಲ್ಲಾ ದೇಶಗಳು ಕೂಡಾ ಶಿಕ್ಷಣದ ಪ್ರಗತಿಗಾಗಿ ಸಾಕಷ್ಟು ಗಮನಹರಿಸುತ್ತಿವೆ ಹಾಗೂ ಬಹಳಷ್ಟು ಹಣವನ್ನು ವಿನಿಯೋಗಿಸುತ್ತಿವೆ. ಒಟ್ಟಿನಲ್ಲಿ ಮಾನವನ ಸರ್ವಾಂಗೀಣ ಅಭಿವೃದ್ಧಿಗೆ ಶಿಕ್ಷಣವು ಮೂಲಭೂತ ಹಕ್ಕುಗಳಾಗಿ ಪರಿಣಮಿಸಿದೆ ಎನ್ನಬಹುದು. ಪ್ರಸ್ತುತ ಅಧ್ಯಯನದಲ್ಲಿ ಕಿತ್ತೂರು ರಾಣಿ ಚೆನ್ನಮ್ಮ ವಸತಿ ಶಾಲೆಯ ವಿದ್ಯಾರ್ಥಿನಿಯರ ಶೈಕ್ಷಣಿಕ ಆಕಾಂಕ್ಷೆ ಮತ್ತು ವಸತಿಶಾಲೆಯ ಹಿನ್ನೆಲೆಗಳನ್ನು ತಿಳಿಯಬಹುದಾಗಿದೆ. ಈ ಅಧ್ಯಯನಕ್ಕೆ ಪೂರಕವಾಗಿ ಚಿಕ್ಕಮಗಳೂರು ಜಿಲ್ಲೆಯ ಕಡೂರು ತಾಲೂಕಿನ ಜೋಡಿಹೋಚಿಹಳ್ಳಿ ಗ್ರಾಮದ 40 ಜನ ಮಾಹಿತಿದಾರರನ್ನು ಸರಳ ಯಾದೃಚ್ಛಿಕ ಮಾದರಿ ವಿಧಾನದಿಂದ ಆಯ್ಕೆ ಮಾಡಿಕೊಂಡು ಮಾಹಿತಿಯನ್ನು ಕಲೆಹಾಕಲಾಗಿದೆ. ಪ್ರಸ್ತುತ ಅಧ್ಯಯನವು ಹೆಣ್ಣು ಮಕ್ಕಳ ವಸತಿ ಶಾಲೆಯ ಹಿನ್ನೆಲೆ ಮತ್ತು ಶೈಕ್ಷಣಿಕ ಆಕಾಂಕ್ಷೆಗಳನ್ನು ಕುರಿತು ಮಾಹಿತಿಯನ್ನು ನೀಡುತ್ತದೆ.*

**ಮುಖ್ಯಪದಗಳು (Keywords):** ವಿದ್ಯಾರ್ಥಿನಿಯರು, ಶಿಕ್ಷಣ, ವಸತಿ ಶಾಲೆ, ಶೈಕ್ಷಣಿಕ ಆಕಾಂಕ್ಷೆ

## ಪೀಠಿಕೆ

ಬಡತನ ಹಾಗೂ ಲಿಂಗತಾರತಮ್ಯವು ಶಿಕ್ಷಣದ ಪ್ರಗತಿಗೆ ಮಾರಕವಾಗಿದ್ದು, ಈ ಶಾಪದಿಂದ ಎಷ್ಟೋ ಹೆಣ್ಣು ಮಕ್ಕಳು ಶಿಕ್ಷಣದಿಂದ ವಂಚಿತರಾಗಿದ್ದು, ಇದರಿಂದ ಸಾಮಾಜಿಕ ಪ್ರಗತಿ ಕುಂಠಿತಗೊಂಡಿದೆ. ದೇಶದಲ್ಲಿ

*Please cite this article as:* ಸವಿತ ಸಿ.ಎನ್ & ಎಂ. ಗುರುಲಿಂಗಯ್ಯ. (2025). ಕಿತ್ತೂರು ರಾಣಿ ಚೆನ್ನಮ್ಮ ವಸತಿ ಶಾಲೆಯ ವಿದ್ಯಾರ್ಥಿನಿಯರ ಶೈಕ್ಷಣಿಕ ಆಕಾಂಕ್ಷೆಗಳು. ಪ್ರತಿಬಿಂಬ: *ಮಲ್ಟಿಡಿಸಿಪ್ಲಿನರಿ ಕನ್ನಡ ರೀಸರ್ಚ್ ಜರ್ನಲ್ ಆಫ್ ಐಐಎಂಆರ್‌ಡಿ, 7(2). ಪು.ಸಂ.* 1–7

ಶಿಕ್ಷಣದ ಪ್ರಗತಿ, ಆರ್ಥಿಕ–ಸಾಮಾಜಿಕ ಬೆಳವಣಿಗೆಯೂ ಸಹ ಕುಂಠಿತಗೊಂಡಿದೆ. ಇದರ ಪರಿಹಾರ ಕ್ರಮವಾಗಿ ಚಿಂತನಾ–ಮಂಥನ ಜರುಗಿದಾಗ ಇಂತಹ ಹೆಣ್ಣು ಮಕ್ಕಳು ಉತ್ತಮ ಪರಿಸರದಲ್ಲಿ ಸುಶಿಕ್ಷಿತರ ಮೇಲ್ವಿಚಾರಣೆಯಲ್ಲಿ ಉಚಿತ ಶಿಕ್ಷಣ ನೀಡಿದಾಗ ಫಲಕಾರಿಯಾಗಬಹುದು ಎಂಬ ವೈಚಾರಿಕ ಹಿನ್ನೆಲೆಯಲ್ಲಿ ಸ್ಥಾಪಿತವಾದ ಶಾಲೆಗಳೇ ಕಿತ್ತೂರು ರಾಣಿ ಚೆನ್ನಮ್ಮ ವಸತಿ ಶಾಲೆಗಳು. 2009–10ರ ಸಾಲಿನಿಂದ ಕರ್ನಾಟಕ ರಾಜ್ಯದಲ್ಲಿ ಹಿಂದುಳಿದ ವರ್ಗಗಳ ಅಥವಾ ದುರ್ಬಲ ವರ್ಗಗಳ ಪ್ರತಿಭಾವಂತ ಹೆಣ್ಣು ಮಕ್ಕಳ ಶಿಕ್ಷಣಕ್ಕಾಗಿ ಕಿತ್ತೂರು ರಾಣಿ ಚೆನ್ನಮ್ಮ ವಸತಿ ಶಾಲೆಗಳನ್ನು ಪ್ರಾರಂಭಿಸಲಾಯಿತು. ಈ ವಸತಿ ಶಾಲೆಗಳು ಆರ್ಥಿಕವಾಗಿ ಬಡ ಹಾಗೂ ದುರ್ಬಲರ ಮಕ್ಕಳ ಶಿಕ್ಷಣಕ್ಕಾಗಿ ರಚಿತವಾದ ಶಾಲೆಗಳಾಗಿವೆ.

**ವಸತಿ ಶಾಲೆಯ ಹಿನ್ನೆಲೆ**

ಸಾಮಾಜಿಕವಾಗಿ, ಶೈಕ್ಷಣಿಕವಾಗಿ, ಆರ್ಥಿಕವಾಗಿ ಹಿಂದುಳಿದ ಗ್ರಾಮೀಣ ಪ್ರದೇಶದ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಹಿಂದುಳಿದ ವರ್ಗ ಮತ್ತು ಅಲ್ಪಸಂಖ್ಯಾತ ವರ್ಗಗಳ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಉತ್ತಮ ಗುಣಮಟ್ಟದ ವಸತಿಸಹಿತ ಮಾದರಿ ಶಾಲೆಗಳನ್ನು ಪ್ರಾರಂಭಿಸಲಾಗಿದೆ. ಪ್ರಾರಂಭದಲ್ಲಿ ಸಮಾಜ ಕಲ್ಯಾಣ ಇಲಾಖೆ, ಹಿಂದುಳಿದ ವರ್ಗಗಳ ಇಲಾಖೆ, ಗಿರಿಜನ ಕಲ್ಯಾಣ ಇಲಾಖೆ, ಸಾರ್ವಜನಿಕ ಶಿಕ್ಷಣ ಇಲಾಖೆ ಹೀಗೆ ವಿವಿಧ ಇಲಾಖೆಗಳ ಅಡಿಯಲ್ಲಿ 6–10ನೇ ತರಗತಿಯವರೆಗೆ ವಸತಿ ಶಾಲೆಗಳನ್ನು ಪ್ರಾರಂಭಿಸಿ, ಆಯಾ ಇಲಾಖೆಗಳ ಅಡಿಯಲ್ಲಿ ಒದಗಿಸಲಾದ ಆಯ–ವ್ಯಯದಿಂದ ನಿರ್ವಹಣೆ ಮಾಡಲಾಗುತ್ತಿತ್ತು. 2001–02ನೇ ಸಾಲಿನಲ್ಲಿ ಈ ಎಲ್ಲಾ ವಸತಿ ಶಾಲೆಗಳ ನಿರ್ವಹಣೆಯನ್ನು ಹೊಸದಾಗಿ ಸ್ಥಾಪಿಸಲಾದ ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘಕ್ಕೆ (Karnataka Residential Educational Institution Society - KREIS) ವಹಿಸಲಾಯಿತು. ದಿನಾಂಕ 01–04–2005ರಿಂದ ಎಲ್ಲಾ ವಸತಿ ಶಾಲೆಗಳ ನಿರ್ವಹಣೆಯನ್ನು ಆಯಾ ಜಿಲ್ಲಾ ಪಂಚಾಯಿತಿಗಳ ವ್ಯಾಪ್ತಿಗೆ ವರ್ಗಾಯಿಸಲಾಯಿತು. ನಂತರ ಸದರಿ ವಸತಿ ಶಾಲೆಗಳ ಆಡಳಿತ ಮತ್ತು ನಿರ್ವಹಣೆಯನ್ನು ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘ, ಬೆಂಗಳೂರು ಇಲ್ಲಿಗೆ ವರ್ಗಾಯಿಸಲಾಯಿತು. 2009–10ನೇ ಸಾಲಿನಲ್ಲಿ ಡಾ. ಡಿ.ಎಂ. ನಂಜುಂಡಪ್ಪ ವರದಿಯಲ್ಲಿ ಗುರುತಿಸಲಾದ 114 ತಾಲೂಕುಗಳಲ್ಲಿ ಹೆಣ್ಣು ಮಕ್ಕಳ ಶಿಕ್ಷಣಕ್ಕಾಗಿ ಕಿತ್ತೂರು ರಾಣಿ ಚೆನ್ನಮ್ಮ ಬಾಲಕಿಯರ ವಸತಿ ಶಾಲೆಗಳನ್ನು ಆರಂಭಿಸಲಾಯಿತು. ಇದೇ ರೀತಿ ಕೇಂದ್ರ ಸರ್ಕಾರದ ಧನಸಹಾಯದೊಂದಿಗೆ ಪರಿಶಿಷ್ಟ ವರ್ಗಗಳ ವಿದ್ಯಾರ್ಥಿಗಳಿಗೆ ಏಕಲವ್ಯ ವಸತಿ ಶಾಲೆಗಳನ್ನು ಆರಂಭಿಸಲಾಯಿತು. ಹೀಗೆ ಹಲವು ವಸತಿ ಶಾಲೆಗಳು ದೇಶದಾದ್ಯಂತ ಕಾರ್ಯನಿರ್ವಹಿಸುತ್ತಿವೆ (ಶಿವಕುಮಾರ್ ಎಸ್.ಕೆ., 2022: 243–247).

**ವಸತಿ ಶಾಲೆಯ ಸ್ಥಾಪನೆ**

2009–10ರ ಸಾಲಿನಲ್ಲಿ ಕರ್ನಾಟಕ ಸರ್ಕಾರದ ಪ್ರಯತ್ನದ ಫಲವಾಗಿ ಭಾರತದ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಬ್ರಿಟಿಷರ ವಿರುದ್ಧ ಖಡ್ಗವೆತ್ತಿದ ವೀರನಾರಿ ಕಿತ್ತೂರು ರಾಣಿ ಚೆನ್ನಮ್ಮನವರ ಸ್ಮರಣಾರ್ಥ ಈ ವಸತಿ ಶಾಲೆಗಳು ಪ್ರಾರಂಭವಾದವು. ವಸತಿ ಶಾಲೆಯ ಉದ್ದೇಶ ಆರ್ಥಿಕವಾಗಿ ಹಿಂದುಳಿದ ಹಾಗೂ

ದುರ್ಬಲ ವರ್ಗದ ಪ್ರತಿಭಾವಂತ ಹೆಣ್ಣು ಮಕ್ಕಳಿಗೆ 6–10ನೇ ತರಗತಿವರೆಗೆ ಉಚಿತ ಹಾಗೂ ಉತ್ತಮ ನಿವಾಸ ಶಿಕ್ಷಣ (ವಸತಿ ಶಿಕ್ಷಣ) ತೆಗೆಯಲಾಗಿದೆ.

**ಅಧ್ಯಯನದ ಉದ್ದೇಶ**

1. ಪ್ರಸ್ತುತ ಅಧ್ಯಯನವು ಕಿತ್ತೂರು ರಾಣಿ ಚೆನ್ನಮ್ಮ ವಸತಿ ಶಾಲೆಯಲ್ಲಿ ಓದುತ್ತಿರುವ ವಿದ್ಯಾರ್ಥಿನಿಯರ ಶೈಕ್ಷಣಿಕ ಆಕಾಂಕ್ಷೆಗಳ ಕುರಿತು ತಿಳಿಯುವುದಾಗಿದೆ.

**ಸಾಹಿತ್ಯಾವಲೋಕನ**

ರಘು (2009) ಅವರ 'ಭಾರತದಲ್ಲಿ ಶಿಕ್ಷಣ ಮತ್ತು ಸಮಾಜ' ಎಂಬ ಶೀರ್ಷಿಕೆಯ ಪುಸ್ತಕದಲ್ಲಿ ಶಿಕ್ಷಣಕ್ಕೆ ಸಂಬಂಧಿಸಿದಂತೆ ಹಿನ್ನೆಲೆ, ಉಗಮ ಹಾಗೂ ಆಯೋಗಗಳ ವಿವರಣೆಯನ್ನು ತಿಳಿಸಲಾಗಿದೆ. ಶಿಕ್ಷಣದ ಹಿಂದಿನ ಮತ್ತು ಇಂದಿನ ಸ್ಥಿತಿಗತಿಗಳನ್ನು ವಿವರವಾಗಿ ವಿಶ್ಲೇಷಿಸಲಾಗಿದೆ. ಸಮಾಜ ಮತ್ತು ಶಿಕ್ಷಣಕ್ಕೆ ಇರುವ ಸಂಬಂಧವನ್ನು ಕುರಿತು ಅಂಕಿ ಅಂಶಗಳನ್ನು ಕ್ರಮಬದ್ಧವಾಗಿ ನೀಡುವ ಪ್ರಯತ್ನವನ್ನು ಲೇಖಕರು ಮಾಡಿದ್ದಾರೆ. ಹೆಣ್ಣು ಮಕ್ಕಳ ಶಿಕ್ಷಣಕ್ಕೆ ಸಂಬಂಧಿಸಿದಂತೆ ಇರುವ ವಿವಿಧ ಶೈಕ್ಷಣಿಕ ಆಯೋಗಗಳನ್ನು ವಿವರಿಸಿ ಮತ್ತು ಅದರ ಮಹತ್ವವನ್ನು ವಿಶ್ಲೇಷಿಸಲಾಗಿದೆ.

ಕರ್ನಾಟಕ ಸರ್ಕಾರ (2017) "ಇಲಾಖಾ ಕಾರ್ಯಕ್ರಮಗಳ ಮಾರ್ಗದರ್ಶಿ' ಎಂಬ ಗ್ರಂಥವು ಚಿಕ್ಕಮಗಳೂರು ಜಿಲ್ಲೆಯ ಎಲ್ಲಾ ವಸತಿ ಶಾಲೆಗಳ ಹೆಸರು, ಸ್ಥಾಪನೆಗೊಂಡ ವರ್ಷ ಮತ್ತು ಅವುಗಳ ಕಾರ್ಯವಿಧಾನವನ್ನು ಕುರಿತು ಮಾಹಿತಿ ನೀಡುತ್ತದೆ. ಚಿಕ್ಕಮಗಳೂರು ಜಿಲ್ಲೆಗೆ ಹೊಸದಾಗಿ ಎಷ್ಟು ವಸತಿ ಶಾಲೆಗಳು ಮಂಜೂರಾಗಿವೆ ಎಂಬುದರ ಸಂಪೂರ್ಣ ಮಾಹಿತಿಯನ್ನು ಅಂಕಿ ಅಂಶಗಳ ಮೂಲಕ ನೀಡುತ್ತದೆ. ಈ ಶಾಲೆಗಳು ವಿದ್ಯಾರ್ಥಿಗಳಿಗೆ ಸಾಮಾಜಿಕವಾಗಿ, ಆರ್ಥಿಕವಾಗಿ ಅಭಿವೃದ್ಧಿ ಹೊಂದಲು ಉಚಿತ ಗುಣಾತ್ಮಕ ಶಿಕ್ಷಣವನ್ನು ನೀಡುವ ಮೂಲಕ ಸರ್ಕಾರದ ಹಲವಾರು ಯೋಜನೆಗಳನ್ನು ಕಾರ್ಯಕ್ರಮಗಳ ಮೂಲಕ ತಿಳಿಸುವ ಪ್ರಯತ್ನವನ್ನು ಈ ಗ್ರಂಥವು ಮಾಡಿದೆ.

ಶಂಕರ್‌ರಾವ್ ಚ.ನ. (2022) ಅವರ 'ಸಮಾಜಶಾಸ್ತ್ರ ದರ್ಶನ–2' ಎಂಬ ಪುಸ್ತಕವು ಹೆಣ್ಣು ಮಕ್ಕಳ ಶಿಕ್ಷಣದ ಮಹತ್ವ, ಉದ್ದೇಶ, ಗುರಿ ಹಾಗೂ ಉಪಯೋಗಗಳನ್ನು ತಿಳಿಸುತ್ತದೆ. ಶಿಕ್ಷಣ ಮತ್ತು ಸಮಾಜಕ್ಕಿರುವ ಸಂಬಂಧಗಳನ್ನು ವಿವರಿಸಿದ್ದಾರೆ. ಶಿಕ್ಷಣದ ಅರ್ಥ, ವ್ಯಾಖ್ಯಾನ, ಉದ್ದೇಶ ಹಾಗೂ ಸಿದ್ಧಾಂತಗಳು ಸಮಾಜಶಾಸ್ತ್ರಕ್ಕೆ ಹೇಗೆ ಪೂರಕವಾಗಿವೆ ಎಂಬುದನ್ನು ವಿವರಣಾತ್ಮಕವಾಗಿ ವಿಶ್ಲೇಷಿಸಿದ್ದಾರೆ. ಶಿಕ್ಷಣ, ಸಮಾಜ, ಶಿಕ್ಷಕ, ಕುಟುಂಬಗಳ ಪರಸ್ಪರ ಸಂಬಂಧಗಳನ್ನು ವಿವರಿಸುತ್ತದೆ.

**ಸಂಶೋಧನಾ ವಿಧಾನ ಮತ್ತು ತಂತ್ರಗಳು**

ಪ್ರಸ್ತುತ ಅಧ್ಯಯನದಲ್ಲಿ ಮಾಹಿತಿ ಸಂಗ್ರಹಣೆಗಾಗಿ ವೈಜ್ಞಾನಿಕ ತಂತ್ರಗಳನ್ನು ಬಳಸಿಕೊಂಡು ಕ್ಷೇತ್ರಾಧ್ಯಯನವನ್ನು ಕೈಗೊಳ್ಳಲಾಗಿದೆ. ಇದರಿಂದ ಗುಣಾತ್ಮಕ ಮತ್ತು ಪರಿಮಾಣಾತ್ಮಕ ಸ್ವರೂಪದ ಮಾಹಿತಿಯನ್ನು ಸಂಗ್ರಹಿಸಲಾಗಿದೆ. ಸಂಶೋಧನೆಗೆ ಅಗತ್ಯವಿರುವ ಮಾಹಿತಿಯನ್ನು ಸಂಗ್ರಹಿಸಲು ಮಾಹಿತಿದಾರರಿಗೆ ಪ್ರಶ್ನಾವಳಿ ಹಾಗೂ ಸಂದರ್ಶನ ಅನುಸೂಚಿಯನ್ನು ಮಾರ್ಗದರ್ಶಕರ ಸಹಾಯದಿಂದ,

ಅನುಭವಿ ವಿಷಯ ಪರಿಣಿತರ, ತಜ್ಞರ ಸಹಾಯದಿಂದ ರೂಪಿಸಿ ಪೂರ್ವಪರೀಕ್ಷೆಗೆ ಒಳಪಡಿಸಿ ಅಂತಿಮವಾಗಿ ಪರಿಪೂರ್ಣ ಪ್ರಶ್ನಾವಳಿ ರಚನೆಯಿಂದ ಸಂದರ್ಶನ ಅನುಸೂಚಿಯನ್ನು ತಯಾರಿಸಿ ಮಾಹಿತಿಯನ್ನು ಸಂಗ್ರಹಿಸಲಾಗಿದೆ.

ಪ್ರಸ್ತುತ ಸಂಶೋಧನಾ ಅಧ್ಯಯನ ಕ್ಷೇತ್ರವನ್ನಾಗಿ ಚಿಕ್ಕಮಗಳೂರು ಜಿಲ್ಲೆಯ ಕಡೂರು ತಾಲೂಕಿನ ಜೋಡಿಹೋಚಿಹಳ್ಳಿ ಗ್ರಾಮದ ಕಿತ್ತೂರು ರಾಣಿ ಚೆನ್ನಮ್ಮ ವಸತಿ ಶಾಲೆಯನ್ನು ಆಯ್ಕೆ ಮಾಡಿಕೊಳ್ಳಲಾಗಿದ್ದು, ಈ ಅಧ್ಯಯನಕ್ಕೆ ಪೂರಕವಾಗಿ ಒಟ್ಟಾರೆ 40 ಜನ ಮಾಹಿತಿದಾರರನ್ನು ಸರಳ ಯಾದೃಚ್ಛಿಕ ಮಾದರಿ ವಿಧಾನದ ಮೂಲಕ ಆಯ್ಕೆ ಮಾಡಿಕೊಳ್ಳಲಾಗಿದೆ.

**ಅಧ್ಯಯನದ ಕಾರ್ಯಕ್ಷೇತ್ರ ಮತ್ತು ಜನಸಂಖ್ಯೆಯ ಮಾದರಿ ಆಯ್ಕೆ**

ಪ್ರಸ್ತುತ ಸಂಶೋಧನಾ ಅಧ್ಯಯನವು ವಿವಿಧ ಮೂಲಗಳನ್ನು ಮಾಹಿತಿಯನ್ನು ಸಂಗ್ರಹಣೆ ಮಾಡುವುದು ಸೂಕ್ತವಾಗಿರುತ್ತದೆ. ಮಾಹಿತಿ ಸಂಗ್ರಹಣೆಯಲ್ಲಿ ಪ್ರಾಥಮಿಕ ಮೂಲಗಳು ಅಧ್ಯಯನ ಕ್ಷೇತ್ರದಿಂದ ನೇರವಾಗಿ ಮಾಹಿತಿಯನ್ನು ಸಂಗ್ರಹಿಸಲಾಗಿದೆ. ಮಾಹಿತಿ ಸಂಗ್ರಹಣೆಯ ಮೂಲಗಳಲ್ಲಿ ಪ್ರಮುಖವಾಗಿ ಎರಡು ವಿಧಗಳಿವೆ. ಅವುಗಳೆಂದರೆ ಪ್ರಾಥಮಿಕ ಮೂಲ ಮತ್ತು ಆನುಷಂಗಿಕ ಅಥವಾ ಮಾಧ್ಯಮಿಕ ಮೂಲ.

ಪ್ರಶ್ನಾವಳಿ, ಸಂದರ್ಶನ ಅನುಸೂಚಿಯನ್ನು ಬಳಸಿಕೊಂಡು ಪ್ರಾಥಮಿಕ ಮಾಹಿತಿಯನ್ನು ಸಂಗ್ರಹಿಸಲು ಸಂಶೋಧಕರು ಕಾರ್ಯಪ್ರವೃತ್ತರಾಗಿದ್ದು ವಾಸ್ತವಿಕ ಕ್ಷೇತ್ರದಿಂದ ತಾವೇ ನೇರವಾಗಿ ಮಾಹಿತಿದಾರರನ್ನು ಸಂದರ್ಶನಕ್ಕೆ ಒಳಪಡಿಸಿ ಟಿಪ್ಪಣಿ ಮಾಡಿಕೊಳ್ಳುವುದರ ಮೂಲಕ ಪ್ರಾಥಮಿಕ ಮಾಹಿತಿಯನ್ನು ಸಂಗ್ರಹಿಸಲಾಗಿದೆ ಹಾಗೂ ಮಾಹಿತಿಯನ್ನು ಪುಷ್ಟೀಕರಿಸಲು ವಿದ್ಯಮಾನ ತಂತ್ರಜ್ಞಾನವನ್ನು ಅಳವಡಿಸಿಕೊಳ್ಳಲಾಗಿದೆ.

***ಸಂದರ್ಶನ:*** ಪೂರ್ವರಚಿತ ಪ್ರಶ್ನಾವಳಿಯನ್ನು ಮತ್ತು ಸಂದರ್ಶನ ಅನುಸೂಚಿಯನ್ನು ಬಳಸಿಕೊಂಡು ಪ್ರಸ್ತುತ ಅಧ್ಯಯನ ಕ್ಷೇತ್ರಕ್ಕೆ ಆಯ್ಕೆ ಮಾಡಿಕೊಂಡಿರುವ ಮಾಹಿತಿದಾರರನ್ನು ವೈಯಕ್ತಿಕವಾಗಿ ಸಂದರ್ಶಿಸಿ ಮಾಹಿತಿಯನ್ನು ಸಂಗ್ರಹಿಸಲಾಗಿದೆ.

***ಅವಲೋಕನ:*** ಅಧ್ಯಯನದಲ್ಲಿ ಆಯ್ಕೆ ಮಾಡಿಕೊಂಡಿರುವ ಕ್ಷೇತ್ರಕ್ಕೆ ನೇರವಾಗಿ ಭೇಟಿ ನೀಡಿ ವಾಸ್ತವ ಸ್ಥಿತಿಗತಿಗಳನ್ನು ಸಮಾಜಶಾಸ್ತ್ರೀಯ ಹಾಗೂ ವೈಜ್ಞಾನಿಕ ದೃಷ್ಟಿಕೋನಗಳಿಂದ ಅವಲೋಕಿಸಿ ವಸ್ತುನಿಷ್ಟ ಮಾಹಿತಿಯನ್ನು ಸಂಗ್ರಹಿಸಲಾಗಿದೆ.

ಪ್ರಸ್ತುತ ಅಧ್ಯಯನಕ್ಕೆ ಅವಶ್ಯಕವೆನಿಸಿದ ಮಾಧ್ಯಮಿಕ ಮಾಹಿತಿಯನ್ನು ಸರ್ಕಾರಿ ಇಲಾಖಾ ದಾಖಲಾತಿಗಳು, ಪುಸ್ತಕಗಳು, ಗ್ರಂಥಗಳು, ಪತ್ರಿಕೆಗಳಿಂದ, ಸರ್ಕಾರಿ ಅಪ್ರಕಟಿತ ಮುಸ್ತಕಗಳು, ಅಂತರ್ಜಾಲ, ಮಹಾಪ್ರಬಂಧಗಳು, ಯೂಟ್ಯೂಬ್, ಸರ್ಕಾರಿ ವೆಬ್‌ಸೈಟ್ ಹಾಗೂ ದೂರದರ್ಶನದ ಮೂಲಕ ಇನ್ನೂ ಮುಂತಾದವುಗಳಿಂದ ಸಂಗ್ರಹಿಸಲಾಗಿದೆ.

**ಕೋಷ್ಠಕ 1:ವಿದ್ಯಾರ್ಥಿನಿಯರ ಶೈಕ್ಷಣಿಕ ಆಕಾಂಕ್ಷೆಗಳನ್ನು ಕುರಿತು ಹೊಂದಿರುವ ಗುರಿಗಳು**

| **ಶೈಕ್ಷಣಿಕ ಆಕಾಂಕ್ಷೆಗಳ ಗುರಿಗಳು** | **ಆವೃತ್ತಿ** | **ಶೇಕಡವಾರು** |
|---|---|---|
| ನಿರ್ದಿಷ್ಟ ಗುರಿಗಳನ್ನು ಹೊಂದಿರುವವರು | 15 | 37.5 |
| ಸಾಮಾನ್ಯ ಗುರಿಗಳನ್ನು ಹೊಂದಿರುವವರು | 25 | 62.5 |
| ಒಟ್ಟು | 40 | 100.00 |
| **ನಿರ್ದಿಷ್ಟ ಗುರಿಗಳನ್ನು ಹೊಂದಿರುವವರು** | **ಆವೃತ್ತಿ (n=15)** | **ಶೇಕಡವಾರು** |
| ಶಿಕ್ಷಕರು–ಶಿಕ್ಷಕಿಯರಿಂದ | 02 | 13.33 |
| ತಂದೆ–ತಾಯಿಯರಿಂದ | 10 | 66.66 |
| ಸ್ವಂತ ಇಚ್ಛೆಯಿಂದ | 03 | 20.00 |

ಮೇಲ್ಕಂಡ ಕೋಷ್ಠಕದಲ್ಲಿ ವಿದ್ಯಾರ್ಥಿನಿಯರ ಶೈಕ್ಷಣಿಕ ಆಕಾಂಕ್ಷೆಗಳನ್ನು ಕುರಿತು ಹೊಂದಿರುವ ಗುರಿಗಳವಿವರವನ್ನು ತಿಳಿಸಲಾಗಿದೆ. ಸಂದರ್ಶಿತ ಮಾಹಿತಿದಾರರಲ್ಲಿ ಶೇಕಡ 37.5ರಷ್ಟು ವಿದ್ಯಾರ್ಥಿನಿಯರು ನಿರ್ದಿಷ್ಟ ಆಕಾಂಕ್ಷೆಗಳನ್ನು ಹೊಂದಿದ್ದೇವೆ ಎಂದು ತಿಳಿಸಿದ್ದು, ಶೇಕಡ 62.5ರಷ್ಟು ವಿದ್ಯಾರ್ಥಿನಿಯರು ಸಾಮಾನ್ಯ ಗುರಿಗಳನ್ನು ಹೊಂದಿರುವುದು ತಿಳಿದುಬಂದಿದೆ. ಸಂದರ್ಶಿತ ಒಟ್ಟು ಮಾಹಿತಿದಾರರಲ್ಲಿ 15 ಜನ ಮಾಹಿತಿದಾರರು ನಿರ್ದಿಷ್ಟ ಗುರಿಗಳನ್ನು ಹೊಂದಿರುವವರಾಗಿದ್ದು ಅವರಲ್ಲಿ ಶೇಕಡ 13.33ರಷ್ಟು ಶಿಕ್ಷಕರು–ಶಿಕ್ಷಕಿಯರಿಂದ ನಿರ್ದಿಷ್ಟ ಗುರಿಗಳನ್ನು ನಿರ್ಧರಿಸಿದ್ದೇವೆ ಎಂದು, ಶೇಕಡ 66.66ರಷ್ಟು ತಂದೆ–ತಾಯಿಯರಿಂದ ನಿರ್ದಿಷ್ಟ ಗುರಿಗಳನ್ನು ನಿರ್ಧರಿಸಿದ್ದೇವೆ ಎಂದು ಹಾಗೂ ಇನ್ನುಳಿದ ಶೇಕಡ 20ರಷ್ಟು ಸ್ವಂತ ಇಚ್ಛೆಯಿಂದ ನಿರ್ದಿಷ್ಟ ಗುರಿಗಳನ್ನು ನಿರ್ಧರಿಸಿದ್ದೇವೆ ಎಂಬುದಾಗಿ ವಿದ್ಯಾರ್ಥಿನಿಯರು ತಿಳಿಸಿದ್ದಾರೆ. ಒಟ್ಟಾರೆಯಾಗಿ ಇವರ ಅಭಿಪ್ರಾಯದಂತೆ ಶೈಕ್ಷಣಿಕ ಆಕಾಂಕ್ಷೆಗಳನ್ನು ನಿರ್ಧರಿಸುವ ಗುರಿಯನ್ನು ಹೆಚ್ಚು ತಂದೆ–ತಾಯಿಯರೇ ನಿರ್ಧರಿಸುವರು ಎಂಬುದಾಗಿ ತಮ್ಮ ಅಭಿಪ್ರಾಯವನ್ನು ಫಲಿತಾಂಶದಿಂದ ತಿಳಿದುಬಂದಿದೆ.

**ವ್ಯಕ್ತವಾದ ಅಂಶಗಳು**

1. ವಿದ್ಯಾರ್ಥಿನಿಯರು ತಮ್ಮ ಶೈಕ್ಷಣಿಕ ಆಕಾಂಕ್ಷೆಯ ಗುರಿಯನ್ನು ಗಮನಿಸಿದಾಗ ಶೇಕಡ 20.00ರಷ್ಟು ವಿದ್ಯಾರ್ಥಿನಿಯರು ನಿರ್ದಿಷ್ಟ ಆಕಾಂಕ್ಷೆಯನ್ನು ಹೊಂದಿದ್ದೇವೆ ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಅಂದರೆ 40 ಜನ ಮಾಹಿತಿದಾರರಲ್ಲಿ 15 ಜನ ಮಾಹಿತಿದಾರರು ತಾವು ಪಡೆದ ಅಂಕಗಳಿಂದ ನಮ್ಮ ಶೈಕ್ಷಣಿಕ ಆಕಾಂಕ್ಷೆಯ ನಿರ್ದಿಷ್ಟ ಗುರಿಯನ್ನು ನಿರ್ಧರಿಸಲಾಗುವುದು ಎಂದು ತಿಳಿಸಿದ್ದಾರೆ.
2. ವಸತಿ ಶಾಲೆಯ ವಿದ್ಯಾರ್ಥಿನಿಯರ ಶೈಕ್ಷಣಿಕ ಆಕಾಂಕ್ಷೆಯ ಗುರಿಯನ್ನು ಗಮನಿಸಿದಾಗ ಶೇಕಡ 62.5ರಷ್ಟು ವಿದ್ಯಾರ್ಥಿನಿಯರು ಸಾಮಾನ್ಯ ಆಕಾಂಕ್ಷೆಯನ್ನು ಹೊಂದಿದ್ದೇವೆ ಎಂಬುದಾಗಿ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಅಂದರೆ 40 ಜನ ಮಾಹಿತಿದಾರರಲ್ಲಿ 25 ಜನ ಮಾಹಿತಿದಾರರು ನಮ್ಮ ಶೈಕ್ಷಣಿಕ ಆಕಾಂಕ್ಷೆಯ ಗುರಿಗಳು ಇನ್ನೂ ನಿರ್ಧಿಷ್ಟವಾಗಿರುವುದಿಲ್ಲ ಸಾಮಾನ್ಯವಾಗಿರುತ್ತವೆ ಮತ್ತು

ತಂದೆ–ತಾಯಿಯರು ಹೆಚ್ಚಿನ ಪ್ರಮಾಣದಲ್ಲಿ ನಮ್ಮ ಶೈಕ್ಷಣಿಕ ಗುರಿಗಳನ್ನು ನಿರ್ಧರಿಸುವ ಹೊಣೆಗಾರಿಕೆಯನ್ನು ಹೊಂದಿರುತ್ತಾರೆ ಎಂಬುದಾಗಿ ತಿಳಿಸಿದ್ದಾರೆ.

**ಸಲಹೆಗಳು**

- ವಿದ್ಯಾರ್ಥಿನಿಯರಿಗೆ ಶೈಕ್ಷಣಿಕ ಆಕಾಂಕ್ಷೆಗೆ ಸಂಬಂಧಿಸಿದಂತೆ ಅಂಕಗಳನ್ನು ಪಡೆದಿರುವ ಆಧಾರದ ಮೇಲೆ ತಮ್ಮ ಆಸಕ್ತಿಯ ಗುರಿಯನ್ನು ನಿರ್ಧರಿಸುವುದಕ್ಕೆ ಸ್ವತಂತ್ರ ನೀಡಬೇಕು.
- ವಿದ್ಯಾರ್ಥಿನಿಯರ ಅಭಿಪ್ರಾಯಕ್ಕೆ ತಕ್ಕಂತೆ ಪೋಷಕರು, ಶಿಕ್ಷಕರು ಪ್ರೋತ್ಸಾಹ ಮತ್ತು ಸಲಹೆಗಳನ್ನು ನೀಡಬೇಕು.
- ವಿದ್ಯಾರ್ಥಿನಿಯರ ಆಸಕ್ತಿ ಮತ್ತು ಸಾಮರ್ಥ್ಯಕ್ಕೆ ತಕ್ಕಂತೆ ಪೋಷಕರು ಮತ್ತು ಶಿಕ್ಷಕರು ಪ್ರೋತ್ಸಾಹ ಮತ್ತು ಮಾರ್ಗದರ್ಶನಗಳನ್ನು ನೀಡಬೇಕು.

ಒಟ್ಟಾರೆಯಾಗಿ ವಿದ್ಯಾರ್ಥಿನಿಯರ ಶೈಕ್ಷಣಿಕ ಆಕಾಂಕ್ಷೆಗಳನ್ನು ನಿರ್ಧರಿಸುವಲ್ಲಿ ನಿರ್ದಿಷ್ಟ ಗುರಿಗಳು ಸಾಮಾನ್ಯ ಗುರಿಗಳಿಗಿಂತ ವಿಶೇಷವಾಗಿರುತ್ತವೆ. ಅದಕ್ಕೆ ಪೂರಕವಾಗುವಂತೆ ವಿದ್ಯಾರ್ಥಿನಿಯು ಪಡೆದ ಅಂಕ, ಸಾಮರ್ಥ್ಯ, ಆಸಕ್ತಿ, ಶಿಕ್ಷಕರ ಮಾರ್ಗದರ್ಶನ, ಪ್ರೋತ್ಸಾಹ ಮತ್ತು ತಂದೆ–ತಾಯಿಯರ ಕಾಳಜಿ ಜವಾಬ್ದಾರಿ ವಿದ್ಯಾರ್ಥಿನಿಯರು ಭವಿಷ್ಯದಲ್ಲಿ ಏನಾಗಬೇಕು ಎಂಬುದನ್ನು ನಿರ್ಧರಿಸುವಲ್ಲಿ ಗುರಿಗಳು ವಿಶೇಷವಾಗಿರುತ್ತವೆ ಮತ್ತು ಪ್ರಮುಖವಾದ ಪಾತ್ರವನ್ನು ವಹಿಸುತ್ತವೆ ಎಂಬುದು ಪ್ರಸ್ತುತ ಅಧ್ಯಯನದಿಂದ ವ್ಯಕ್ತವಾಗಿದೆ.

**ಪರಾಮರ್ಶನ ಗ್ರಂಥಗಳು**


- ದೇಸಾಯಿ ಜಿ.ಎನ್. (2006). *ಉದಯೋನ್ಮುಖ ಭಾರತದಲ್ಲಿ ಶಿಕ್ಷಣ.* ವಿದ್ಯಾನಿಧಿ ಪ್ರಕಾಶನ, ಗದಗ.
- ಜಗನ್ನಾಥ್‌ರಾವ್ ಡಿ. (2008). *ಕರ್ನಾಟಕದಲ್ಲಿ ಶಿಕ್ಷಣದ ಅವಲೋಕನ.* ಭಾರತ ಸಂಸ್ಕೃತಿ ಪ್ರಕಾಶನ, ಬೆಂಗಳೂರು.
- ಕರ್ನಾಟಕ ಸರ್ಕಾರ (2017). *ಇಲಾಖಾ ಕಾರ್ಯಕ್ರಮಗಳ ಮಾರ್ಗದರ್ಶಿ.* ಸಮಾಜಕಲ್ಯಾಣ ಇಲಾಖೆ, ಚಿಕ್ಕಮಗಳೂರು ಜಿಲ್ಲಾಡಳಿತ ಮತ್ತು ಜಿಲ್ಲಾ ಪಂಚಾಯಿತಿ.
- ಕೊಂಗವಾಡ, ಎನ್.ಬಿ. (2017). *ಸಮಕಾಲೀನ ಭಾರತದಲ್ಲಿ ಶಿಕ್ಷಣ.* ವಿದ್ಯಾನಿಧಿ ಪ್ರಕಾಶನ, ಗದಗ.
- ಮಹಮ್ಮದ್ ಪೀರ್ (2017). *ಸಮಾಜಶಾಸ್ತ್ರೀಯ ಸಿದ್ಧಾಂತಗಳು,* ಸಂಚಲನ ಪ್ರಕಾಶನ, ದಕ್ಷಿಣ ಕನ್ನಡ.
- ರಘು (2009). *ಭಾರತದಲ್ಲಿ ಶಿಕ್ಷಣ ಮತ್ತು ಸಮಾಜ,* ಚೇತನಾ ಬುಕ್ ಹೌಸ್, ಮೈಸೂರು.
- ಶಂಕರರಾವ್, ಚ.ನ. (2021). *ಸಾಮಾಜಿಕ ಸಂಶೋಧನಾ ಕೈಪಿಡಿ.* ಜೈಭಾರತ್ ಪ್ರಕಾಶನ, ಮಂಗಳೂರು.
- ಶಂಕರ್‌ರಾವ್ ಚ.ನ. (2022). *ಸಮಾಜಶಾಸ್ತ್ರ ದರ್ಶನ–2.* ಜೈಭಾರತ್ ಪ್ರಕಾಶನ, ಮಂಗಳೂರು.

- ಶಿವಕುಮಾರ್ ಎಸ್.ಕೆ. (2022). *ಭಾರತದಲ್ಲಿ ಸಮಕಾಲೀನ ಶಿಕ್ಷಣ.* ವಿಸ್ಮಯ ಪ್ರಕಾಶನ, ಮೈಸೂರು.
- ಶಿವಯ್ಯ ಎಸ್. (2010). *ಉದಯೋನ್ಮುಖ ಭಾರತದಲ್ಲಿ ಶಿಕ್ಷಣ.* ಪೂಜಾ ಪ್ರಕಾಶನ, ದಾವಣಗೆರೆ.
- Bhatia, K.K. (1987). *Principles of Education.* Kalyani Publishers, New Delhi.
- Gerard Guthrie (2013). *Basic Research Methods.* Sage Publications India Pvt. Ltd., New Delhi.
- Kothari, C.R. and Gaurav Garg (2024). *Research Methodology-Methods and Techniques,* New Age International Limited Publishers, London-New Delhi.